3

# ದೇವರ ಮಗನ ಮೂಲಕ ರಕ್ಷಣೆ

ಸತ್ಯವೇದದ ಚರಿತ್ರೆಯಲ್ಲಿ, ಯೇಸು ಕ್ರಿಸ್ತನೇ ಕೇಂದ್ರಬಿಂದುವಾಗಿರುವನು ಆತನ ಬರುವಿಕೆಗಾಗಿ ಹಳೇ ಒಡಂಬಡಿಕೆಯು ಸಿದ್ಧತೆ ಮಾಡಿರುತ್ತದೆ. ಸುವಾರ್ತೆಗಳು ಸಹ ಆತನ ಬರೋಣದ ಬಗ್ಗೆ ತಿಳಿಸುತ್ತವೆ. ಹೊಸ ಒಡಂಬಡಿಕೆಯ ಉಳಿದ ಗ್ರಂಥಗಳು ಸಹ ಆತನ ಬರೋಣದಲ್ಲಿ ಆಗಬಹುದಾದ ಸಂಗತಿಗಳನ್ನು ಮತ್ತು ಆತನ ಬರೋಣವನ್ನು ವಿಶ್ಲೇಷಿಸುತ್ತದೆ.

ಆದ್ದರಿಂದ, ಯೋಹಾನನು ಆಶ್ಚರ್ಯವಾಗಿ ಬರೆದು, ತನ್ನ ಓದುಗರು ವಿಶ್ವಾಸದಿಂದ ಇರುವಂತೆ, "ರಕ್ಷಣೆಯು ಆತನ ಮಗನಿಂದಲೇ" ಎಂದು ಅಧ್ಯಾಯ 2ನೇ ಪತ್ರದಲ್ಲಿ ಒತ್ತಿ ಹೇಳಿರುವನು,

> ನನ್ನ ಪ್ರಿಯರಾದ ಮಕ್ಕಳೇ, ನೀವು ಪಾಪಮಾಡದಂತೆ ಈ ಮಾತುಗಳನ್ನು ನಿಮಗೆ ಬರೆಯುತ್ತೇನೆ. ಯಾವನಾದರೂ ಪಾಪಮಾಡಿದರೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ.

"ನೀತಿವಂತನಾದ ಯೇಸು ಕ್ರಿಸ್ತನು" ನಮ್ಮ ರಕ್ಷಣೆಯ ನಿರೀಕ್ಷೆಯಾಗಿರುವನು!

ಈ ಪಾಠದಲ್ಲಿ ಯೇಸು ಯಾರು ಎಂಬ ಅಂಶವನ್ನು ಯೋಹಾನನು ತಿಳಿಸಿರುವನು. ಆತನು ಏನು ಮಾಡಿರುವನು ಎಂಬುದನ್ನು ನೋಡಿದ ನಂತರ, ಅಂತಿಮವಾಗಿ ನಮ್ಮಿಂದ ಆತನು ಬಯಸುವದಾದರೂ ಏನು ಎಂಬುದನ್ನು ನೋಡೋಣ.

## ಈ ಯೇಸು ಯಾರು?

**1 ಯೋಹಾನದಲ್ಲಿರುವ ಯೇಸುವಿನ ಕುರಿತಾದ ವಿವರಣೆ:**

ಯೋಹಾನನ ಪ್ರಕಾರ, ಯೇಸು ...

1. *"ಆದಿಯಿಂದ ಇದ್ದದ್ದೇನು"* (1 ಯೋಹಾನ 1:1-3).[1]
2. *"ಜೀವ ವಾಕ್ಯ"* (1 ಯೋಹಾನ 1:1; ನೋಡಿ ಯೋಹಾನ 1:1, 14).
3. *"ನಿತ್ಯ ಜೀವ"* (1 ಯೋಹಾನ 1:2; ನೋಡಿ ಯೋಹಾನ 1:4; 14:6).
4. *"ಯೇಸು" - ಅಂದರೆ "ರಕ್ಷಣೆ"* (1 ಯೋಹಾನ 1:3, 7; ನೋಡಿರಿ ಮತ್ತಾಯ 1:21, 25).
5. *"ಕ್ರಿಸ್ತನು" - ಅಂದರೆ "ಅಭಿಷಕ್ತ"* (1 ಯೋಹಾನ 1:3; 2:22; 5:1). 1 ಯೋಹಾನದಲ್ಲಿರುವ "ಕ್ರಿಸ್ತನು" ಎಂಬ ಹೆಸರಿನಲ್ಲಿ, ಯೇಸು ದೈವೀಕ ವ್ಯಕ್ತಿ ಎಂಬ ಅರ್ಥವಿದೆ.
6. *ದೇವರ ಮಗನು, ತಂದೆಯ ಮಗನು* (1 ಯೋಹಾನ 1:3, 7; 2:22, 23; 4:9, 14, 15; 5:9). ದೇವರ ಮಗನು ಎಂದರೆ ದೇವರ ಸ್ವಭಾವವುಳ್ಳವನು ಎಂದರ್ಥ (ನೋಡಿ ಯೋಹಾನ 10:32-38 ಮತ್ತು 2 ಯೋಹಾನ 3, 4, 9).
7. *"ನೀತಿವಂತನು"* (1 ಯೋಹಾನ 2:1; 3:7; ಹೋಲಿಸಿ ಇಬ್ರಿಯ 4:15).

8. *ಮಧ್ಯವರ್ತಿ* (1 ಯೋಹಾನ 2:1).
9. *ಪಾಪದ ಪ್ರಾಯಶ್ಚಿತ* (1 ಯೋಹಾನ 2:2; 4:10).[2]
10. *ರಕ್ಷಕನು* (1 ಯೋಹಾನ 4:14).[3]

**ಯೇಸುವಿನ ಕುರಿತ ದುರ್ಬೋಧನೆ**

ಯೇಸುವಿನ ಕುರಿತ ಈ ವಿವರಣೆಯನ್ನು ನೀಡಿದ ನಂತರ, ಯೋಹಾನನು ದುರ್ಬೋಧಕರ ಕುರಿತು ತನ್ನ ಓದುಗರು ಎಚ್ಚರವಾಗಿರಬೇಕು ಅಂದನು. ದುರ್ಬೋಧಕರ ಕುರಿತ ಸಂಗತಿಯೇ ಒಂದು ಪ್ರಮುಖ ಅಂಶವಾಗಿದೆ, ಅಧ್ಯಾಯದ 2ನೇ ಭಾಗದಲ್ಲಿ ಅವನು ಬರೆದು:

> ಮಕ್ಕಳಿರಾ, ಇದು ಕಡೇ ಗಳಿಗೆಯಾಗಿದೆ; ಕ್ರಿಸ್ತವಿರೋಧಿ ಬರುತ್ತಾನೆಂದು ನೀವು ಕೇಳಿದ್ದೀರಷ್ಟೆ; ಈಗಲೂ ಕ್ರಿಸ್ತವಿರೋಧಿಗಳು ಬಹುಮಂದಿ ಎದ್ದಿದ್ದಾರೆ; ಇದರಿಂದ ಇದು ಕಡೇ ಗಳಿಗೆಯಾಗಿದೆ ಎಂದು ತಿಳುಕೊಳ್ಳುತ್ತೇವೆ. ಅವರು ನಮ್ಮನ್ನು ಬಿಟ್ಟು ಹೊರಟು ಹೋದರು, ಆದರೆ ಅವರು ನಮ್ಮವರಾಗಿರಲಿಲ್ಲ. ಅವರು ನಮ್ಮವರಾಗಿದ್ದರೆ ನಮ್ಮ ಜೊತೆಯಲ್ಲೇ ಇರುತ್ತಿದ್ದರು, ಆದರೆ ಅವರು ನಮ್ಮನ್ನು ಬಿಟ್ಟು ಹೋದದರಿಂದ ಕ್ರೈಸ್ತರೆನಿಸಿ ಕೊಳ್ಳುವವರೆಲ್ಲರೂ ನಮ್ಮವರಲ್ಲವೆಂಬದು ಸ್ಪಷ್ಟವಾಗಿ ತೋರಬಂತು. ನೀವು ಪವಿತ್ರನಾಗಿರುವಾತನಿಂದ ಅಭಿಷೇಕವನ್ನು ಹೊಂದಿದವರಾಗಿದ್ದು ಎಲ್ಲರೂ ತಿಳಿದವರಾ ಗಿದ್ದೀರಿ. ನೀವು ಸತ್ಯವನ್ನು ತಿಳಿಯದವರೆಂಬ ಭಾವನೆಯಿಂದಲ್ಲ, ನೀವು ಅದನ್ನು ತಿಳಿದಿರುವದರಿಂದಲೂ ಯಾವ ಸುಳ್ಳೂ ಸತ್ಯದಿಂದ ಹುಟ್ಟಿ ಬರುವದಿಲ್ಲವೆಂಬದನ್ನು ನೀವು ತಿಳಿದವರಾಗಿರುವದರಿಂದಲೂ ನಿಮಗೆ ಬರೆದೆನು. ಯೇಸುವು ಕ್ರಿಸ್ತನಲ್ಲ ಎನ್ನುವವನು ಸುಳ್ಳುಗಾರನಲ್ಲವಾದರೆ ಸುಳ್ಳುಗಾರನು ಬೇರೆ ಎಲ್ಲಿದ್ದಾನೆ? ಯಾವನಾದರೂ ತಾನು ತಂದೆಯನ್ನೂ ಮಗನನ್ನೂ ಅರಿಯೆನು ಎಂದು ಹೇಳಿದರೆ ಅವನೇ ಕ್ರಿಸ್ತ ವಿರೋಧಿ. ತಾನು ದೇವರ ಮಗನಿಗೆ ಸೇರಿದವನಲ್ಲವೆನ್ನು ವವನು ತಂದೆಗೆ ಸೇರಿದವನಲ್ಲ; ತಾನು ಮಗನಿಗೆ ಸೇರಿದವನೆಂದು ಒಪ್ಪಿಕೊಳ್ಳುವವನು ತಂದೆಗೂ ಸೇರಿದವನಾಗಿದ್ದಾನೆ. ನೀವಂತೂ ಯಾವ ಬೋಧನೆಯನ್ನು ಮೊದಲಿನಿಂದ ಕೇಳಿದ್ದೀರೋ ಅದು ನಿಮ್ಮಲ್ಲಿ ನೆಲೆಗೊಂಡಿರಲಿ. ಮೊದಲಿನಿಂದ ನೀವು ಕೇಳಿದ ಬೋಧನೆಯು ನಿಮ್ಮಲ್ಲಿ ನೆಲೆಂಗೊಂಡಿದ್ದರೆ ನೀವು ಸಹ ಮಗನಲ್ಲಿಯೂ ತಂದೆಯಲ್ಲಿಯೂ ನೆಲೆಗೊಂಡಿರುತ್ತೀರಿ. ಕ್ರಿಸ್ತನು ತಾನು ಕೊಡುತ್ತೇನೆಂದು ನಮಗೆ ವಾಗ್ದಾನ ಮಾಡಿದ್ದು ನಿತ್ಯಜೀವವು.
>
> ನಿಮ್ಮನ್ನು ಸನ್ಮಾರ್ಗದಿಂದ ತಪ್ಪಿಸಬೇಕೆಂದಿರುವವರ ವಿಷಯವಾಗಿ ಈ ಸಂಗತಿಗಳನ್ನು ನಿಮಗೆ ಬರೆದಿದ್ದೇನೆ. ಆದರೆ ಆತನಿಂದ ನೀವು ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವದು ಅವಶ್ಯವಿಲ್ಲ. ಆತನು ಮಾಡಿದ ಅಭಿಷೇಕವು ಎಲ್ಲಾ ವಿಷಯಗಳಲ್ಲಿ ನಿಮಗೆ ಉಪದೇಶ ಮಾಡುವಂಥದಾಗಿದ್ದು ಸತ್ಯವಾಗಿದೆ, ಸುಳ್ಳಲ್ಲ. ಅದು ನಿಮಗೆ ಉಪದೇಶಮಾಡಿದ ಪ್ರಕಾರ ಆತನಲ್ಲಿ ನೆಲೆಗೊಂಡಿರಿ.
>
> ಪ್ರಿಯರಾದ ಮಕ್ಕಳೇ, ಆತನು ಪ್ರತ್ಯಕ್ಷನಾಗುವಾಗ ನಾವು ಆತನ ಆಗಮನದಲ್ಲಿ ಆತನ ಮುಂದೆ ನಿಲ್ಲಲು ನಾಚಿಕೆಪಡದೆ ಧೈರ್ಯದಿಂದಿರುವಂತೆ ಆತನಲ್ಲಿ ನೆಲೆಗೊಂಡಿ ರೋಣ. ಆತನು ನೀತಿವಂತನಾಗಿದ್ದಾನೆಂಬುದು ನಿಮಗೆ ಗೊತ್ತಾಗಿದ್ದರೆ ನೀತಿಯನ್ನು ಅನುಸರಿಸುವ ಪ್ರತಿಯೊಬ್ಬನು ಆತನಿಂದ ಹುಟ್ಟಿದವನಾಗಿದ್ದಾನೆಂದು ನೀವು ತಿಳಿದಿದ್ದೀರಿ.

1 ಯೋಹಾನ 4:1-3ರಲ್ಲಿ ದುರ್ಬೋಧಕರ ಕುರಿತು ಪುನಃ ಬರೆದನು:

> ಪ್ರಿಯರೇ, ಅನೇಕ ಮಂದಿ ಸುಳ್ಳುಪ್ರವಾದಿಗಳು ಲೋಕದೊಳಗೆ ಬಂದಿರುವದರಿಂದ

> ನೀವು ಆತ್ಮದ ಎಲ್ಲಾ ನುಡಿಗಳನ್ನು ನಂಬದೆ ಆಯಾನುಡಿ ಗಳು ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು ಪರೀಕ್ಷಿಸಬೇಕು. ಪ್ರೇರಿಸುವಂಥವನು ದೇವರ ಆತ್ಮನೇ ಎಂದು ತಿಳುಕೊಳ್ಳುವದಕ್ಕೆ ಲಕ್ಷಣವೇನಂದರೆ ಮನುಷ್ಯನಾಗಿ ಬಂದಯೇಸು ಕ್ರಿಸ್ತನನ್ನು ಒಪ್ಪಿಕೊಳ್ಳುವ ಆತ್ಮವು ದೇವರಿಂದ ಪ್ರೇರಿತವಾದದ್ದು. ಯೇಸುವನ್ನು ಒಪ್ಪದೆ ಇರುವ ಆತ್ಮವು ದೇವರಿಂದ ಪ್ರೇರಿತವಾದದ್ದಲ್ಲ; ಅದು ಕ್ರಿಸ್ತವಿರೋಧಿಯ ಆತ್ಮವಾಗಿದೆ. ಅದು ಬರುವದೆಂಬದನ್ನು ನೀವು ಕೇಳಿದ್ದೀರಲ್ಲಾ; ಈಗಲೂ ಲೋಕದಲ್ಲಿ ಅದೆ.

ಈ ದುರ್ಬೋಧಕರು ಯಾರು? ಮತ್ತು ಅವರ ಬೋಧನೆ ಯಾವುದು? ಅವರನ್ನು ಯೋಹಾನನು "ಮೋಸಗಾರರು" ಹಾಗೂ ಕ್ರಿಸ್ತ ವಿರೋಧಿಗಳು ಎಂದು ಕರೆದನು. "ಅವರು ನಮ್ಮಿಂದ ಹೊರ ಹೋದವರು" (1 ಯೋಹಾನ 2:18, 19; 2 ಯೋಹಾನ 1:7) - ಇನ್ನೊಂದು ಅರ್ಥದಲ್ಲಿ, ಅವರು[4] ನಮ್ಮಲ್ಲಿದ್ದ ಅಪೊಸ್ತಲರೇ, ಅವರು ಎರಡನೇ ಶತಮಾನದ ಗ್ನಾಸ್ಟಿಸಮ್ ಎಂಬ ವಿಚಾರವನ್ನು ನಂಬಿದವರಾಗಿದ್ದರು.

ಜ್ಞಾನ ಎಂಬ ಗ್ರೀಕ್ ಪದದಿಂದ "ಗ್ನಾಸ್ಟಿಸಮ್" ಎಂಬ ಪದವು ಉದ್ಭವಿಸಿದೆ ಇತರರು ಪಡೆಯದ "ಜ್ಞಾನವನ್ನು" (*gnosis*) ಅವರು ಹೊಂದಿದ್ದರು ಎಂದು ನಂಬಿದ್ದರು. ಅವರಲ್ಲಿ ವಿವಿಧ ಪಂಗಡವಿದ್ದರೂ, ಒಂದು ವಿಚಾರದಲ್ಲಿ ಅವರು ಒಂದೇ ಆಗಿದ್ದರು. ಆತ್ಮವು ಒಳ್ಳೇಯದೇ ಆದರೆ ದೇಹವು ಪಾಪಮಯವೇ ಎಂದು ನಂಬಿದ್ದರು. ದೇವರು ಒಳ್ಳೆಯ ಆತ್ಮನು, ಆದರೆ ಆತನು ಮಾನವನಾಗುವದು ಅಸಾಧ್ಯ ಎಂದು ನಂಬಿದ್ದರು. ಅವರ ಪ್ರಕಾರ ದೇವರು ಮಾಂಸದಾರಿಯಲ್ಲ!

ಹೀಗಿರುವಲ್ಲಿ, ಯೇಸು ಯಾರು? ಗ್ನಾಸ್ಟಿಕ್ ಪಂಗಡದವನಿಗೆ, ಎರಡು ಸಾಧ್ಯತೆಗಳಿದ್ದವು. (1) ಯೇಸು ನಿಜವಾಗಿ ಮಾಂಸದಾರಿಯಾಗಿರದೆ, ಆತನು ಹಾಗೆ ಕಾಣಿಸಿಕೊಂಡನಷ್ಟೆ, ಯೇಸು ಲೋಕದಲ್ಲಿರುವಾಗ ಆತನು ಮೂರು ಮುಖದ ಚಿತ್ರಣವಷ್ಟೆ ಒಬ್ಬನು ಆತನನ್ನು ಮುಟ್ಟಿದಾಗ, ಅದು ಆತನನ್ನು ಹಾದು ಹೋಗುತ್ತಿತ್ತು. (2) ಯೇಸು ಕೇವಲ ಮಾನವನಷ್ಟೆ, ಆದರೆ ಆತನು ದೀಕ್ಷಾಸ್ನಾನ ಹೊಂದಿದಾಗ ಕ್ರಿಸ್ತನು ಬಂದು ಆತನಲ್ಲಿ ಜೀವಿಸಿದನು. ಆದದರಿಂದ ಯೇಸು ತನ್ನ ಸೇವಾ ಅವಧಿಯಲ್ಲಿ ಮಾನವನಾಗಿ ಕ್ರಿಸ್ತನನ್ನು ಪಡೆದವನಾಗಿದ್ದನು. ಹಾಗೂ ಆತನ ಮರಣ ಹೊಂದಿದಾಗ, ಕ್ರಿಸ್ತನು ಆತನನ್ನು ಬಿಟ್ಟುಹೋದನು, ಆದ್ದರಿಂದ ಯೇಸು ತನ್ನ ಮರಣದಲ್ಲಿ ಪೂರ್ಣ ಮಾನವನಾಗಿದ್ದನು. ಇಲ್ಲಿ ಯೇಸು ಮತ್ತು ಕ್ರಿಸ್ತನ ನಡುವೆ ಇರುವ ವ್ಯತ್ಯಾಸವನ್ನು ಗಮನಿಸಬೇಕಾಗಿದೆ.[5] ಯೇಸು ಕೇವಲ ಮನುಷ್ಯನಾಗಿದ್ದರಿಂದ ಮತ್ತು ಕ್ರಿಸ್ತನು ದೈವ ಶಕ್ತಿಯಾಗಿದ್ದರಿಂದ ಯೇಸು ಮಾನವನಲ್ಲಾ ಎಂಬದು ಅವರ ನಂಬಿಕೆ.

ಯೋಹಾನನು ಎರಡು ಕೋನಗಳಿಂದ ಯೋಚಿಸಿರುವನು. ಯೇಸು ಲೋಕಕ್ಕೆ ಮಾನವನಾಗಿ ಬಂದನು ಹಾಗೂ ಆತನು ದೇವರ ಮಗನೇ ಆಗಿದ್ದನು! ಆತನು ಯೇಸು ಕ್ರಿಸ್ತನೆಂದು, ದೈವೀಕ ಪುರುಷನೆಂದು-ಆತನು ಮಾಂಸದಾರಿಯಾದನೆಂದು ನಂಬದೆ ಹೋದರೆ, ನಮಗೆ ರಕ್ಷಣೆ ಇರುವದಿಲ್ಲ!

**ಯೇಸುವಿನ ಸಾಕ್ಷಿಗಳು**

ಆತನ ಕುರಿತಾದ ಸಾಕ್ಷಿಗಳು ಎಂದು 1 ಯೋಹಾನನ ಪತ್ರಿಕೆಯಲ್ಲಿ ತಿಳಿಸಿರುವದರಿಂದ,[6] ಆ ಸಾಕ್ಷಿಗಳು ಯಾರು? ನಾವು ಆತನನ್ನು ಏಕೆ ನಂಬಬೇಕು?

(1) *ಅಪೊಸ್ತಲರು.* ಅಪೊಸ್ತಲರು ಯಾವಾತನನ್ನು ಸ್ಪರ್ಶಿಸಿ, ಕೇಳಿ ಆತನನ್ನು ಕಣ್ಣಿಂದ ಕಂಡಿದ್ದಾರೋ, ಅವರ ಬಗ್ಗೆ ಯೋಹಾನನು ಮಾತಾಡಿದನು, ಅದರ ಕುರಿತು ಯೋಹಾನನು, "ಆ ಜೀವವು ಪ್ರತ್ಯಕ್ಷವಾಯಿತು; ತಂದೆಯ ಬಳಿಯಲ್ಲಿದ್ದು ನಮಗೆ ಪ್ರತ್ಯಕ್ಷವಾದಂಥ ಆ ನಿತ್ಯ ಜೀವವನ್ನು ನಾವು ಕಂಡು ಅದನ್ನು ಕುರಿತು ಸಾಕ್ಷಿ ಹೇಳಿ ಅದನ್ನು ನಿಮಗೆ ಪ್ರಸಿದ್ಧಿ ಪಡಿಸು

ತ್ತೇವೆ" (1 ಯೋಹಾನ 1:2).

(2) *ಆತ್ಮ ನೀರು ಹಾಗೂ ರಕ್ತ.* 1 ಯೋಹಾನ 5:6-8ನ್ನು ಓದಿರಿ,[7]

> ಈತನು, ಅಂದರೆ ಯೇಸು ಕ್ರಿಸ್ತನು, ನೀರಿನಿಂದಲೂ ಸಾಕ್ಷಿಹೊಂದಿದವನು. ನೀರಿನಿಂದ ಮಾತ್ರಲ್ಲ, ನೀರಿನಿಂದಲೂ ರಕ್ತದಿಂದಲೂ ಸಾಕ್ಷಿ ಹೊಂದಿದವನಾಗಿದ್ದಾನೆ. ಇದಲ್ಲದೆ ಆತ್ಮನು ಸಾಕ್ಷಿ ಕೊಡುವವನಾಗಿದ್ದಾನೆ; ಆತ್ಮನು ಸತ್ಯಸ್ವರೂಪನೇ. ಆತ್ಮ ನೀರು ರಕ್ತ ಎಂಬ ಮೂರು ಸಾಕ್ಷಿಗಳುಂಟು; ಈ ಮೂರು ಒಂದೇ ಅಭಿಪ್ರಾಯವಾಗಿ ಸಾಕ್ಷಿ ಹೇಳುತ್ತವೆ.

ಈ ಮೂರು ಸಾಕ್ಷಿಗಳು ಒಂದೇ ಅಭಿಪ್ರಾಯವನ್ನು ಹೊಂದಿರುತ್ತವೆ. ನೀರು, ಯೇಸುವಿನ ದೀಕ್ಷಾಸ್ನಾನಕ್ಕೆ ಗುರುತಾಗಿರಬಹುದು. ರಕ್ತವು ಯೇಸುವಿನ ಮರಣ ಪುನರುತ್ಥಾನಕ್ಕೆ ಗುರುತು. "ಆತ್ಮನು" ಅಂದರೆ "ಸತ್ಯ" ಎಂಬದೆ, ಆತನಲ್ಲಿ ಅಸತ್ಯವಿಲ್ಲ. ಯೇಸುವಿನ ದೀಕ್ಷಾಸ್ನಾನದಲ್ಲಿ, ಯೇಸು ತನ್ನ ಮಗನೆಂದು ದೇವರು ಸಾಕ್ಷಿ ನುಡಿದನು.[8] ಆತನ ಮರಣದ ಸಮಯದಲ್ಲಿ, ಅನೇಕ ಅದ್ಭುತಗಳಾದವು. ಸೂರ್ಯನು ಕತ್ತಲಾದನು ಭೂಕಂಪನವಾಯಿತು, ದೇವಾಲಯದ ತೆರೆಯು ಹರಿದುಹೋಯಿತು. ನಂತರ ಪುನರುತ್ಥಾನ ವಾಯಿತು. ನಂತರದಲ್ಲಿ ಆತ್ಮನ ಸ್ಫೂರ್ತಿಯಿಂದ ಅಪೊಸ್ತಲರು ಕ್ರಿಸ್ತನನ್ನು ಪ್ರಸಂಗಿಸಿದರು. ನಂತರ, ದೀಕ್ಷಾಸ್ನಾನ ಹೊಂದಿದವರು ಪವಿತ್ರಾತ್ಮದಾನ ಪಡೆದರು (ಅಪೊಸ್ತಲರ ಕೃತ್ಯಗಳು 2:38; 5:32). ಯೇಸು ತಾನು ಏನಾಗಿದ್ದನು ಎಂದು ಹೇಳಿದ್ದ ಸಂಗತಿಗಳಿಗೆ, ರಕ್ಷಿಸಲ್ಪಟ್ಟವರೇ ಸಾಕ್ಷಿಗಳಾಗಿದ್ದರು. ಈ ಮೂರು ಸಾಕ್ಷಿಗಳು, ಯೇಸು ದೈವೀಕ ಪುರುಷನೆಂದು ಒಂದೇ ಅಭಿಪ್ರಾಯವುಳ್ಳವರಾಗಿದ್ದರು.

(3) *ದೇವರು.* ಯೇಸುವಿನ ಧೈವಿಕತೆಗೆ, ದೇವರೇ ಸಾಕ್ಷಿಯಾಗಿದ್ದನು,

> ನಾವು ಮನುಷ್ಯರ ಸಾಕ್ಷಿಯನ್ನು ತೆಗೆದು ಕೊಳ್ಳುತ್ತೇವಲ್ಲಾ; ದೇವರ ಸಾಕ್ಷಿಯು ಅದಕ್ಕಿಂತ ವಿಶೇಷವಾಗಿದೆ. ದೇವರು ಕೊಟ್ಟ ಸಾಕ್ಷಿ ಏನಂದರೆ ಆತನು ತನ್ನ ಮಗನ ವಿಷಯದಲ್ಲಿ ಹೇಳಿದ್ದೇ. ದೇವರ ಮಗನಲ್ಲಿ ನಂಬಿಕೆ ಇಟ್ಟವನು ಆ ಸಾಕ್ಷಿಯನ್ನು ತನ್ನಲ್ಲೇ ಹೊಂದಿದ್ದಾನೆ. ದೇವರನ್ನು ನಂಬದವನು ಆತನನ್ನು ಸುಳ್ಳುಗಾರನನ್ನಾಗಿ ಮಾಡಿದ್ದಾನೆ; ಹೇಗಂದರೆ ದೇವರು ತನ್ನ ಮಗನ ವಿಷಯವಾಗಿ ಹೇಳಿರುವ ಸಾಕ್ಷಿಯಲ್ಲಿ ಅವನು ನಂಬಿಕೆಯಿಡಲಿಲ್ಲ. ಆ ಸಾಕ್ಷಿ ಯಾವದಂದರೆ ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು, ಆ ಜೀವವು ಆತನ ಮಗನಲ್ಲಿ ಅದೆ ಎಂಬದೇ. ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ (1 ಯೋಹಾನ 5:9-12).

ದೇವರು ಅನೇಕ ವಿಚಾರಗಳ ಮೂಲಕ ಯೇಸು ತನ್ನ ಮಗನೆಂದು ಸಾಕ್ಷಿ ನುಡಿದನು. ಈ ವಿಧವಾಗಿ ದೇವರು ಎರಡು ಸಾರಿ ಸಾಕ್ಷಿ ನುಡಿದನು (ಮತ್ತಾಯ 3:17; 17:5). ಆತನು ದೇವರ ಮಗನಾಗಿದ್ದರಿಂದ ಆತನು ಅದ್ಭುತಗಳನ್ನು ದೇವರ ಬಲದಿಂದ ಮಾಡಿದನು (ಇಬ್ರಿಯ 2:4; ಯೋಹಾನ 20:30, 31). ಕ್ರಿಸ್ತನ ಮತ್ತು ಅಪೊಸ್ತಲರ ಮೂಲಕ ದೇವರು ತಾನು ಯಾರೆಂದು ಪ್ರಕಟಿಸಿ, ನಿತ್ಯ ಜೀವಕ್ಕೆ ಯೇಸುವೇ ಮಾರ್ಗ - ಆತನಿಂದಲೇ ರಕ್ಷಣೆ ಎಂದು ಸಾಕ್ಷಿಕರಿಸಿದನು.

**ಯೇಸುವಿನ ದೈವೀಕ ವ್ಯಕ್ತಿತ್ವದಿಂದ ಉಂಟಾದ ಪರಿಣಾಮಗಳು**

ಯೇಸು ದೈವೀಕ ವ್ಯಕ್ತಿತ್ವ ಹೊಂದಿದ್ದನು - ಆದರೆ ಈ ಹೇಳಿಕೆಯಲ್ಲಿ ನಮಗೆ ಏನು ಅರ್ಥವಾಗಿದೆ? ಮೊದಲನೇ ಶತಮಾನದವರಿಗೆ ಆದ ಅನಿಸಿಕೆಯೇ ನಮಗೂ ಆಗುತ್ತದೆ - ಅಂದರೆ ರಕ್ಷಣೆ ಪಡೆಯಲು, ಆತನೇ ದೇವರ ಮಗನೆಂದು ನಂಬಬೇಕು!

ಈ ಒಂದು ಹೇಳಿಕೆಯು ಸಾಮಾನ್ಯ ಸಭೀಕರಿಗೆ ಕ್ರಾಂತಿಕಾರಿಯಲ್ಲದಿರಬಹುದು ಆದರೆ ಆದಿ ಸಭೆಗೆ ಅದು ಕ್ರಾಂತಿಕಾರಿಯಾಗಿತ್ತು. ಯೇಸು ಸಹ ಈ ಕುರಿತು ಏನನ್ನು ಹೇಳಿ ರುವದಿಲ್ಲ. ಆತನ ಶಿಷ್ಯರು ಸಹ ಸಮರ್ಥಿಸಿ ಕೊಂಡಿರುವದಿಲ್ಲ. ಯೇಸುವನ್ನು ನಂಬದೆ, ಆತನ ಸುವಾರ್ತೆಗೆ ಒಳಗಾಗುವ ತನಕ, ಯಾರಿಗೂ ರಕ್ಷಣೆ ಇಲ್ಲವೆಂದು ಪ್ರಕಟಿಸಿದರಷ್ಟೆ!

ಇವರ ಸಾಕ್ಷಿಗಳು ಸಮರ್ಥನೆಗೊಂಡಿದ್ದರೆ, ಯೇಸು ಮಾನವನಾಗಿ ಬಂದಿರುವದಾದರೆ, ಅವುಗಳು ಈ ದಿನದವರೆಗೂ ಸತ್ಯ ಸಂಗತಿಗಳೇ ಆಗಿವೆ! ಪ್ರಾಯಶಃ ಶೇಕಡ 70 ರಷ್ಟು ಜನರು ಪ್ರಪಂಚದಲ್ಲಿ ಕ್ರೈಸ್ತರಾಗಿರುವದಿಲ್ಲ. ಒಂದು ವೇಳೆ ಆರು ಬಿಲಿಯನ್ ಜನರು ಲೋಕದಲ್ಲಿ ಇರುವದಾದರೆ, ಅದರಲ್ಲಿ ಐದು ಬಿಲಿಯನ್ ಪ್ರೌಢವಸ್ತೆಯಲ್ಲಿದ್ದರೆ, 3.5 ಬಿಲಿಯನ್ ಜನರು ನಾಶನದ ಹಾದಿಯಲ್ಲಿದ್ದಾರೆ. ಯಾಕಂದರೆ ಅವರು ಯೇಸುವನ್ನು ನಂಬಿ, ವಿಧೇಯರಾಗಿರುವದಿಲ್ಲ!

ಕ್ರೈಸ್ತರೆನಿಸಿಕೊಂಡವರ ಬಗ್ಗೆಯೂ ನಾವುಗಳು ಚಿಂತಿಸಬೇಕಿದೆ. ಅವರಲ್ಲಿ ಅನೇಕರು ಯೇಸುವನ್ನು ಮಹಾನ್‌ವ್ಯಕ್ತಿ ಹಾಗೂ ಗುರುವೆಂದು ಮಾತ್ರ ತಿಳಿದಿದ್ದಾರೆ. ಆತನ ಹೊರತು ಬೇರೆಯವರನ್ನು ಅನುಸರಿಸಲು ಅವರು ಇಷ್ಟಪಡುವದಿಲ್ಲ. ಯೇಸುವನ್ನು ನಂಬದೆ ಇರುವವರು ನಾಶವಾಗುತ್ತಾರೆ ಎಂಬದನ್ನು ಅವರು ಅರಿತಿರುವದಿಲ್ಲ. ಕ್ರೈಸ್ತರಲ್ಲಿ ಹಲವರು ಆತನನ್ನು ನಂಬಿದ್ದರೂ, ಇತರೆ ಧರ್ಮದ ಸದಸ್ಯರಾಗಿರಬಹುದು ಎಂದು ಪ್ರತಿಪಾದಿಸುವವರಿದ್ದಾರೆ, ಅಥವಾ ನಾಸ್ತಿಕನು ಆಗಿರಬಹುದ ಒಬ್ಬನು ಒಳ್ಳೆಯವನಾದರೆ ಸಾಕು ಎನ್ನುತ್ತಾರೆ!

ಯೇಸುವನ್ನು ನಂಬುವದು ಒಂದು ಆಯ್ಕೆಯ ಪ್ರಕ್ರಿಯೇ ಆಗಿರುವದಿಲ್ಲ. ಒಬ್ಬನ ರಕ್ಷಣೆಗೆ, ಯೇಸುವನ್ನು ನಂಬುವದು ದೇವರಿಂದ ದೊರೆತಿರುವ ಒಂದೇ ಮಾರ್ಗವಾಗಿದೆ. ಹೇಗೆ ಸೂರ್ಯನಿಲ್ಲದೆ, ಭೂಮಿಯು ಬದುಕಲು ಅಸಾಧ್ಯವಾಗಿದೆಯೋ ಅದೇ ರೀತಿಯಲ್ಲಿ ದೇವರು ನೀಡುವ ನಿತ್ಯತ್ವವು ಆತನ ಮಗನಿಲ್ಲದೆ ಅಸಾಧ್ಯವಾಗಿದೆ!

## ಯೇಸು ಮಾಡಿರುವ ಕಾರ್ಯವೇನು?

ಮನುಷ್ಯರಿಗಾಗಿ, ಯೇಸು ಮಾಡಿರುವ ಕಾರ್ಯವೇನು? ಎಂಬದು ಎರಡನೆಯ ಪ್ರಶ್ನೆಯಾಗಿದೆ: "ಆತನು ಏನು ಮಾಡಿದನು?" "ಹಾಗೂ ಮಾಡುತ್ತಿರುವನು?" ಎಂಬ ಎರಡು ಪ್ರಶ್ನೆಗಳಿವೆ.

**ಯೇಸು ಏನು ಮಾಡಿರುವನು**

ದೇವರು ತನ್ನ ಮಗನನ್ನು ಅಥವಾ ಯೇಸು ಲೋಕಕ್ಕೆ ಬಂದನು ಎಂದು 1 ಯೋಹಾನದಲ್ಲಿ ಆರು ಸಾರಿ ತಿಳಿಸಲಾಗಿದೆ. ಉದಾಹರಣೆ 1 ಯೋಹಾನ 2:2 "ಆತನು ನಮ್ಮ ಪಾಪಗಳನ್ನು ನಿವಾರಣ ಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣ ಮಾಡುತ್ತಾನೆ."[9] 1 ಯೋಹಾನ 3:16: "ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದು ಬಂದದೆ, ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ."[10] ಪಾಪದ ನಿವಾರಣೆಗಾಗಿ ಯೇಸು ಪ್ರತ್ಯಕ್ಷನಾದನು (1 ಯೋಹಾನ 3:5), ಸೈತಾನನ ಕೆಲಸಗಳನ್ನು ಲಯಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು (1 ಯೋಹಾನ 3:8), "ದೇವರು ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟದರಲ್ಲಿಯೇ ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷವಾಗಿದೆ" (1 ಯೋಹಾನ 4:9), "ತಂದೆಯು ತನ್ನ ಮಗನನ್ನು ಲೋಕ ರಕ್ಷಕನನ್ನಾಗಿ ಕಳುಹಿಸಿಕೊಟ್ಟಿರುವದನ್ನು ನಾವು ನೋಡಿದ್ದೇವೆ, ಅದರ ವಿಷಯದಲ್ಲಿ ಸಾಕ್ಷಿ ಹೇಳುತ್ತೇವೆ" (1 ಯೋಹಾನ 4:14).

**ಯೇಸು ಈಗ ಏನು ಮಾಡುತ್ತಿರುವನು**

ಯೇಸು ನೀಡಿರುವ ಆಶೀರ್ವಾದ ಗತಕಾಲಕ್ಕೆ ಮಾತ್ರ ಸೀಮಿತವಾಗಿರುವದಿಲ್ಲ - ಆತನು ಲೋಕಕ್ಕೆ ಬಂದು ಶಿಲುಬೆಯ ಮರಣದ ನಿಮಿತ್ತ ರಕ್ಷಣೆ ನೀಡಿದನು. ಅದು ಈ ದಿನಕ್ಕೂ ಪ್ರಚಲಿತವಾಗಿದೆ. ಯೇಸು ತನ್ನ ಶಿಷ್ಯರಿಗಾಗಿ ಒಂದು ಕಾರ್ಯವನ್ನು ಮಾಡುತ್ತಿರುವನು! ಆ ಕಾರ್ಯವೇನು?

(1) *ಆತನ ರಕ್ತವು ನಮ್ಮನ್ನು ಶುದ್ಧಿಕರಿಸುತ್ತಿದೆ.* ನಾವು ಆತನಂತೆ ಬೆಳಕಿನಲ್ಲಿ ನಡೆದರೇ, ದೇವರೊಂದಿಗೆ ನಾವು ಅನ್ಯೋನ್ಯತೆಯಲ್ಲಿರುತ್ತೇವೆ, ಮತ್ತು ಆತನ ರಕ್ತವು ನಮ್ಮನ್ನು ಸಕಲ ಪಾಪಗಳಿಂದ ಬಿಡುಗಡೆ ಮಾಡುತ್ತದೆ (1 ಯೋಹಾನ 1:7).[11] ಆ ರಕ್ತವು ನಮ್ಮ ಪಾಪವನ್ನು ನಿವಾರಣೆ ಮಾಡುತ್ತದೆ. ನಾವು ಕ್ರೈಸ್ತರಾಗುವಾಗ ಮಾತ್ರವಲ್ಲ, ನಾವು ಪಾಪಮಾಡುವಾಗಲು ಸಹಾಯಿಸುತ್ತದೆ, ಅದರ ಪರಿಣಾಮವಾಗಿ ಕ್ಷಮಿಸಲ್ಪಟ್ಟಿದ್ದೇವೆ.

(2) *ಆತನು ನಮ್ಮ (Advocate) ಮಧ್ಯವರ್ತಿಯಾಗಿದ್ದಾನೆ,*[12] ಆತನು ತಂದೆಗೂ ನಮಗೂ ಮಧ್ಯವರ್ತಿಯಾಗಿದ್ದಾನೆ. ಈ ಕುರಿತು ಯೋಹಾನನು ಬರೆದು, "ನನ್ನ ಪ್ರಿಯರಾದ ಮಕ್ಕಳೇ, ನೀವು ಪಾಪಮಾಡದಂತೆ ಈ ಮಾತುಗಳನ್ನು ನಿಮಗೆ ಬರೆಯುತ್ತೇನೆ. ಯಾವನಾದರೂ ಪಾಪಮಾಡಿದರೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ" (1 ಯೋಹಾನ 2:1). ನಾವುಗಳು ಪರಲೋಕದ ನ್ಯಾಯಾಲಯದಲ್ಲಿ ಅಪ ರಾಧಿಗಳಾಗಿ ನಿಂತಿರುವಾಗ ಯೇಸು ತಂದೆಯ ಮುಂದೆ ನಮಗಾಗಿ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುವತ್ತಿರುತ್ತಾನೆ: ಅಲ್ಲಿ ಯೇಸು, ಈತನು ನನ್ನ ಸಹೋದರ [ಸಹೋದರಿ] ಅವನು ಪಾಪ ಮಾಡಿರುವನು ಎಂದು ನಾನು ಅರಿತಿರುವೆನು ಯಾಕೆಂದರೆ ನಾನು ಸಹ ಮಾನವನಾಗಿದ್ದೆನು, ಪಾಪ ಮಾಡದೆ ಇರುವದು ಕಷ್ಟಕರವೇ. ಅವನು ತನ್ನ ಪಾಪಕ್ಕಾಗಿ ಮರುಗಿದ್ದಾನೆ. ದಯವಿಟ್ಟು ಅವನನ್ನು ಕ್ಷಮಿಸಿ. ಅವರ ಪಾಪಕ್ಕಾಗಿ, ನಾನು ಪ್ರಾಯಶ್ಚಿತ್ತ ನೀಡಿರುವೆನು, ಯೇಸು ನಮ್ಮ ಮಧ್ಯವರ್ತಿಯಾಗಿದ್ದರೆ, ಆತನು ನನ್ನ ಮನವಿಯನ್ನು ಗೆದ್ದು, ನಮಗೆ ಕ್ಷಮಾಪಣೆ ದೊರೆತಿದೆ!

(3) *ಆತನು ನಮ್ಮ ನಿತ್ಯ ಜೀವದ ನಿರೀಕ್ಷೆ.* "ದೇವರು ನಮಗೆ ನಿತ್ಯಜೀವವನ್ನು ನೀಡಿರುವನು, ಆ ಜೀವವು ಆತನ ಮಗನಲ್ಲಿದೆ" (1 ಯೋಹಾನ 5:11). ನಿತ್ಯ ಜೀವವೆಂಬದು ಯೋಹಾನನ ಭಾಷೆಯಾಗಿದೆ. ನಾವು ಆತನಿಗೆ ಸೇರಿದವಾದರೇ, ಆತನ ಜೀವದಲ್ಲಿ ಪಾಲುಗಾರರಾಗುತ್ತೇವೆ. ಕ್ರೈಸ್ತರು ನಿರೀಕ್ಷಿಸಿರುವ ಕ್ರಿಸ್ತನ ನಿತ್ಯಜೀವದಲ್ಲಿರುತ್ತೇವೆ. ಆ ನಿತ್ಯ ಜೀವವು ಅಳತೆ ಮಾಡಲಾರದ, ಸಮಯ ನಿಗಧಿಯಾಗದ ನಿತ್ಯತ್ವವಾಗಿರುತ್ತದೆ. ಈಗ ಕ್ರಿಸ್ತನಲ್ಲಿರುವದಾದರೆ, ನಿತ್ಯತ್ವಕ್ಕೆ ಆತನಲ್ಲಿ ಹೊಂದಿಕೊಳ್ಳುತ್ತೇವೆ.

ಹೌದು, ಕ್ರೈಸ್ತರಾಗುವಾಗ, ರಕ್ಷಿಸಲ್ಪಡುತ್ತೇವೆ. ಕ್ರೈಸ್ತರಾಗಿ ಪಾಪ ಮಾಡುವಾಗ, ಕ್ಷಮಾಪಣೆಹೊಂದಿ ರಕ್ಷಿಸಲ್ಪಡುತ್ತೇವೆ. ನಾವು ನಿತ್ಯತ್ವದ ಫಲವನ್ನು ಹೊಂದುವಾಗ, ನ್ಯಾಯ ತೀರ್ಪಿನಿಂದಲೂ ರಕ್ಷಿಸಲ್ಪಡುತ್ತೇವೆ. ದೇವರ ಮಗನಾದ ಯೇಸುವಿನಿಂದ ರಕ್ಷಿಸಲ್ಪಡುತ್ತವೆ. ನಮ್ಮ ರಕ್ಷಣೆಗಾಗಿ ಪ್ರಥಮ ಹಂತದ ಮರಣವನ್ನು ಹೊಂದಿದನು, ಆತನ ರಕ್ತವು ಶುದ್ಧಿಕರಿಸುತ್ತಿದೆ, ನಿತ್ಯತ್ವಕ್ಕೆ ಆತನೇ ಮೂಲವಾಗಿದ್ದಾನೆ.

## ಯೇಸುವಿಗೆ ಅಗತ್ಯವಿರುವದಾದರೂ ಏನು?

ಜನರಿಗಾಗಿ, ಆತನು ಮಹತ್ವದ ಕಾರ್ಯವನ್ನು ಮಾಡಿರುವದರಿಂದ ಆತನು ನಮ್ಮಿಂದ ಏನನ್ನು ಬಯಸುತ್ತಾನೆ? ಅಧ್ಯಾಯ 2ರಲ್ಲಿ ಇದಕ್ಕೆ ಉತ್ತರವಿದೆ. 1 ಯೋಹಾನ 2:3-17:

> ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ ಅದರಿಂದಲೇಆತನನ್ನು ಬಲ್ಲವ ರಾಗಿದ್ದೇವೆಂದು ತಿಳುಕೊಳ್ಳುತ್ತೇವೆ. ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು

ಕೈಕೊಳ್ಳದೆ ನಡೆಯುವವನು ಸುಳ್ಳುಗಾರನಾಗಿದ್ದಾನೆ; ಸತ್ಯವೆಂಬುದು ಅವನಲ್ಲಿ ಇಲ್ಲ. ಯಾವನಾದರೂ ಆತನ ವಾಕ್ಯವನ್ನು ಕೈಕೊಂಡು ನಡೆದರೆ ಅವನಲ್ಲಿ ನಿಜವಾಗಿ ದೇವರ ಮೇಲಣ ಪ್ರೀತಿಯು ಪರಿಪೂರ್ಣವಾಗಿದೆ. ಇದರಿಂದಲೇ ಆತನಲ್ಲಿದ್ದೇವೆಂಬ ದನ್ನು ತಿಳುಕೊಳ್ಳುತ್ತೇವೆ. ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವದಕ್ಕೆ ಬದ್ಧನಾಗಿದ್ದಾನೆ.

ಪ್ರಿಯರೇ, ನಾನು ನಿಮಗೆ ಬರೆಯುವದು ಹೊಸ ಅಪ್ಪಣೆಯಲ್ಲ, ಮೊದಲಿಂದಲೂ ನಿಮಗಿದ್ದ ಹಳೆಯ ಅಪ್ಪಣೆಯಾಗಿದೆ; ಈ ಹಳೆಯ ಅಪ್ಪಣೆಯು ನೀವು ಕೇಳಿದ ವಾಕ್ಯವೇ. ಆದರೂ ನಾನು ನಿಮಗೆಬರೆಯುವದು ಹೊಸ ಅಪ್ಪಣೆಯೇ; ಇದು ಆತನಲ್ಲಿಯೂ ನಿಮ್ಮಲ್ಲಿಯೂ ಸತ್ಯವಾಗಿದೆ; ಹೇಗಂದರೆ ಕತ್ತಲೆಯು ಕಳೆದುಹೋಗುತ್ತದೆ, ನಿಜವಾದ ಬೆಳಕು ಈಗ ಪ್ರಕಾಶಿಸುತ್ತಲಿದೆ. ಬೆಳಕಿನಲ್ಲಿದ್ದೇನೆಂದು ಹೇಳಿಕೊಂಡು ತನ್ನ ಸಹೋ ದರನನ್ನು ದ್ವೇಷಿಸುವವನು ಈವರೆಗೂ ಕತ್ತಲೆಯಲ್ಲಿದ್ದಾನೆ. ತನ್ನ ಸಹೋದರನನ್ನು ಪ್ರೀತಿಸುವವನು ಬೆಳ ಕಿನಲ್ಲಿ ನೆಲೆಗೊಂಡಿದ್ದಾನೆ, ಮತ್ತು ಸಹೋದರನನ್ನು ದ್ವೇಷಿ ಸುವವನು ಕತ್ತಲೆಯಲ್ಲಿದ್ದಾನೆ, ಕತ್ತಲೆಯಲ್ಲಿ ನಡೆದುಕೊಳ್ಳುತ್ತಾನೆ. ಕತ್ತಲೆಯು ಅವನ ಕಣ್ಣುಗಳನ್ನು ಕಾಣದ ಹಾಗೆ ಮಾಡಿದ್ದರಿಂದ ತಾನು ಎಲ್ಲಿಗೆ ಹೋಗುತ್ತಾನೋ ಅವನಿಗೆ ತಿಳಿಯದು.

ಪ್ರಿಯರಾದ ಮಕ್ಕಳೇ, ಕ್ರಿಸ್ತನ ಹೆಸರಿನ ನಿಮಿತ್ತ ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿರುವದರಿಂದ ನಿಮಗೆ ಬರೆಯುತ್ತೇನೆ. ತಂದೆಗಳೇ ಆದಿಯಿಂದಿರುವಾತ ನನ್ನು ನೀವು ಬಲ್ಲವರಾಗಿರುವದರಿಂದ ನಿಮಗೆ ಬರೆಯುತ್ತೇನೆ. ಯೌವನಸ್ತರೇ, ನೀವು ಕೆಡುಕನನ್ನು ಜಯಿಸಿರುವದರಿಂದ ನಿಮಗೆ ಬರೆಯು ತ್ತೇನೆ.

ಮಕ್ಕಳಿರಾ, ನೀವು ತಂದೆಯನ್ನು ಬಲ್ಲವರಾಗಿರುವದರಿಂದ ನಿಮಗೆ ಬರೆದಿದ್ದೇನೆ. ತಂದೆಗಳೇ, ಆದಿಯಿಂದಿರವಾತನನ್ನು ನೀವು ಬಲ್ಲವರಾಗಿರುವದರಿಂದ ನಿಮಗೆ ಬರೆ ದಿದ್ದೇನೆ. ಯೌವನಸ್ಥರೇ, ನೀವು ಶಕ್ತರಾಗಿರುವದರಿಂದಲೂ ದೇವರ ವಾಕ್ಯವು ನಿಮ್ಮಲ್ಲಿ ನೆಲೆಗೊಂಡಿರುವದರಿಂದಲೂ ನೀವು ಕೆಡುಕನನ್ನು ಜಯಿಸಿರುವದರಿಂದಲೂ ನಿಮಗೆ ಬರೆದಿದ್ದೇನೆ.

ಲೋಕವನ್ನಾಗಲಿ ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ. ಲೋಕದಲ್ಲಿರುವ ಶರೀರದಾಶೆ ಕಣ್ಣಿನಾಶೆ ಬದುಕು ಬಾಳಿನ ಡಂಬ ಈ ಮೊದಲಾದವು ಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ. ಲೋಕವೂ ಅದರ ಆಶೆಯೂ ಗತಿಸಿ ಹೋಗುತ್ತವೆ; ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು.

ಈ ವಾಕ್ಯದ ಅನುಗುಣವಾಗಿ, ಆತನ ರಕ್ತದಿಂದ ರಕ್ಷಿಸಲ್ಪಟ್ಟವರಿಂದ ದೇವರು ನಾಲ್ಕು ಸಂಗತಿಗಳನ್ನು ಬಯಸುತ್ತಾನೆ.

(1) *ನಾವು ಕ್ರೈಸ್ತರಾದ ನಂತರ ನಾವು ನಂಬಿರುವ ಸತ್ಯಗಳನ್ನು ಎತ್ತಿ ಹಿಡಿಯಬೇಕು* (2:12-14). ಇಲ್ಲಿ ಮೂರು ವಿಧವಾದ ಕ್ರೈಸ್ತರನ್ನು ಹೆಸರಿಸಲಾಗಿದೆ. ತಂದೆಗಳೇ - ಯೌವನಸ್ಥರೇ - ಮಕ್ಕಳೇ ಇಲ್ಲಿ ಸಂಬಂಧದ ಕುರಿತು ತಿಳಿಸಿಲಾಗಿದೆ. ಇಲ್ಲಿ, ಯೋಹಾನನು ಕ್ರೈಸ್ತರೆಲ್ಲರ ವಿಳಾಸ ವನ್ನು ತಿಳಿಸಿರುವನು. ಅವರು ಯೇಸುವನ್ನು ಹಾಗೂ ಆತನು ಮಾಡಿರುವ ಕಾರ್ಯಗಳನ್ನು ನೆನಪು ಮಾಡಬೇಕೆಂದನು. ಆದಿಯಲ್ಲಿದ್ದವನು ನಿಮ್ಮ ಪಾಪ ಕ್ಷಮೆಮಾಡಿರುವನು, "ನೀವು ಸೈತಾನನನ್ನು ಜೈಸಿರುವಿರಿ"; "ನಿಮ್ಮ ತಂದೆಯನ್ನು ಅರಿತಿರುವಿರಿ"; "ಬಲವುಳ್ಳವರಾಗಿದ್ದು, ದೇವರ ವಾಕ್ಯವನ್ನು ಹಿಡಿದವರಾಗಿರುವಿರಿ." ರಕ್ಷಣೆಗೆ ಅಗತ್ಯವಾದ ಕೆಲವು ಸತ್ಯಗಳನ್ನು ತಾವು ಮಾತ್ರ ಅರಿತಿರುವವರು ಎಂದು ದುರ್ಬೋಧಕರು ತಿಳಿದಿದ್ದರು, ಕ್ರೈಸ್ತರು ಕೆಲವು ಸತ್ಯಗಳನ್ನು ಅರಿತಿರುವದಿಲ್ಲ ಎಂದು ತಿಳಿದಿದ್ದರು.

(2) *ಆತನನ್ನರಿತವರು ಆಜ್ಞೆಗಳನ್ನು ಕೈ ಕೊಳ್ಳಬೇಕೆಂದನು* (2:3-6). "ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಳ್ಳದೆ ನಡೆಯುವವನು ಸುಳ್ಳುಗಾರನಾಗಿದ್ದಾನೆ; ಸತ್ಯವೆಂಬುದು ಅವನಲ್ಲಿ ಇಲ್ಲ" (1 ಯೋಹಾನ 2:4). ಯಾವ ಆಜ್ಞೆಗಳನ್ನು ಪಾಲಿಸಬೇಕು? ಎಲ್ಲಾ ಆಜ್ಞೆಗಳನ್ನು! ಆಜ್ಞೆಗಳನ್ನು ಸರಿಯಾಗಿ ಆಯ್ಕೆ ಮಾಡಿಕೊಳ್ಳದವನು (1 ಯೋಹಾನ 2:5; ನೋಡಿ ವಚನ 6). ಆತನ ಅನುಯಾಯಿ ಆಗಲು ಸಾಧ್ಯವೇ. ನನ್ನ ನೆರೆಯವನಿಗೆ ಕ್ರಿಸ್ತನು ಹೇಳಿರುವಂತೆ ಸಹಾಯ ಮಾಡುವೆನು, ಆದರೆ ಸಭೆಗೆ ಹೋಗುವದಾದರೇ ಮಾತ್ರ ನೀಡುವದಾಗಲೀ ಮಾಡುವೆನು? ಎಂದು ಹೇಳುವದು, ನಿಜವಾದ ಉತ್ತರವಾಗಿರುವದಿಲ್ಲ!

(3) *ಪರಸ್ಪರ ಪ್ರೀತಿಸಬೇಕು* (1 ಯೋಹಾನ 2:7-11). ದೇವರು ನೀಡಿರುವ ಸಕಲ ಆಜ್ಞೆಗಳಲ್ಲಿ, ನಿನ್ನ ಸಹೋದರನನ್ನು ಪ್ರೀತಿಸಬೇಕೆಂಬದು ವಿಶೇಷವಾದ ಆಜ್ಞೆಯಾಗಿದೆ. ಇದು ಹೊಸ ಆಜ್ಞೆಯಲ್ಲ. ಇದರಲ್ಲಿ ಸಕಲ ಆಜ್ಞೆಗಳು ಒಳಗೊಂಡಿವೆ. ಯೇಸು ಇದನ್ನು ತನ್ನ ಶಿಷ್ಯರಿಗೆ "ಹೊಸ" ಆಜ್ಞೆ ಎಂದು ತಿಳಿಸಿದ್ದನು (ಯೋಹಾನ 13:34, 35).[13] ನಾವು ಬೆಳಕಿನಲ್ಲಿ ನಡೆಯುತ್ತಿದ್ದೇವೆ ಎಂದು ಹೇಳಿ, ಸಹೋದರನನ್ನು ದ್ವೇಷಿಸಿದರೆ ನಾವು ಪಾಪ ಮಾಡಿದ್ದೇವೇ ಹಾಗೂ ಕತ್ತಲಲ್ಲಿ ನಡೆಯುತ್ತಿದ್ದೇವೆ. ನಾವು ಸಹೋದರ ಹಾಗೂ ಸಹೋದರಿಯರನ್ನು ಪ್ರೀತಿಸುವ ನಿಮಿತ್ತ ಕ್ರಿಸ್ತನು ನಮಗಾಗಿ ಮಾಡಿರುವ ಸಂಗತಿಗಳಿಗೆ ಸ್ಪಂದಿಸುವವರಾಗಿದ್ದೇವೆ.

(4) *ನಾವು ಲೋಕವನ್ನು ಪ್ರೀತಿಸಬಾರದು* (1 ಯೋಹಾನ 2:15-17). ನಾವು ವಾಸ್ತವವಾಗಿರುವ ಲೋಕವನ್ನು ಪ್ರೀತಿಸಬಾರದು ಎಂದು ಹೇಳದೆ, ಶರೀರದಾಶೆ, ಕಣ್ಣಿನ ಆಶೆ, ಬದುಕು ಬಾಳಿನ ಡಂಭ ಇವುಗಳನ್ನು ಪ್ರೀತಿಸಬಾರದು, ನಾವುಗಳು ಇವುಗಳನ್ನು ಹೊಂದಿದ್ದರೆ, ತಂದೆಗಾಗಿ ಬದುಕಲು ಸಾಧ್ಯವಿಲ್ಲ.

ಲೋಕವನ್ನು ಪ್ರೀತಿಸದೆ, ದೇವರನ್ನೇ ಪ್ರೀತಿಸಬೇಕೆಂದನು. "ಲೋಕವೂ ಅದರ ಆಶೆಯೂ ಗತಿಸಿ ಹೋಗುತ್ತದೆ" (1 ಯೋಹಾನ 2:17). ಲೋಕದಲ್ಲಿರುವವುಗಳಿಂದ ತೃಪ್ತಿ ಹೊಂದಿದರೂ, ಅದು ನಾಶವಾದ ನಂತರ, ಉಳಿಯುವ ಸಂಗತಿಗಳು ಯಾವವು? ಆದರೆ, "ದೇವರ ಚಿತ್ತವನ್ನು ನೆರವೇರಿಸುವವನು, ನಿತ್ಯವಾಗಿ ಜೀವಿಸುತ್ತಾನೆ!" ನಾವು ಲೋಕವನ್ನು ಪ್ರೀತಿಸದೆ, ದೇವರನ್ನು ಪ್ರೀತಿಸುವದಾದರೆ ಚಿರಕಾಲ ಬದುಕುತ್ತೇವೆ.

## ಮುಕ್ತಾಯ

ಯೇಸು ಮಾನವನಾಗಿ ಬಂದ ಪುತ್ರನು. ದೇವರು ಆತನನ್ನು ಲೋಕದ ರಕ್ಷಕನನ್ನಾಗಿ ಕಳುಹಿಸಿರುವನು, ಆತನು ನಮ್ಮನ್ನು ಸಾಗಿಸುತ್ತಾನೆ ಆದಾಗ್ಯೂ, ರಕ್ಷಿಸಲ್ಪಟ್ಟವರು ದೇವರ ಕೆಲವು ನಿಬಂಧನೆಗಳನ್ನು ಪಾಲಿಸಬೇಕು. (1) ನಾವು ನಂಬಿರುವ ಸತ್ಯದಲ್ಲಿ ದೃಢವಾಗಿರಬೇಕು. (2) ಆತನ ಆಜ್ಞೆಗಳನ್ನು ಕೈಕೊಳ್ಳಬೇಕು. (3) ಪರಸ್ಪರ ಪ್ರೀತಿಸಬೇಕು. (4) ಲೋಕವನ್ನು ಪ್ರೀತಿಸಬಾರದು.

ಒಂದು ವೇಳೆ ನೀವು ಪ್ರಯಾಣಿಸಬೇಕಾಗಿದ್ದ ವಾಹನ ಅಥವಾ ರೈಲುಗಾಡಿ ಹೊರಟು ಹೋಗಿದ್ದರೆ, ಆ ಕ್ಷಣವು ಬಹಳ ವ್ಯಥೆಯ ಸಮಯವಾಗಿರುವದಲ್ಲವೇ - ಆದರೆ ಆ ಕ್ಷಣದಲ್ಲಿ ಮತ್ತೊಂದು ವಾಹನ ಅಥವಾ ರೈಲುಗಾಡಿ ದೊರಕುವದಾದರೆ - ಆನಂದವಾಗುತ್ತದೆ. ಆದರೆ ಪರಲೋಕಕ್ಕೆ ಹೊಯ್ಯಬಹುದಾದ ಕ್ರಿಸ್ತನನ್ನು ನೀವು ತಪ್ಪಿಸಿಕೊಳ್ಳ ಬಾರದು, ಪರಲೋಕಕ್ಕೆ ಹೋಗಲು ಇನ್ನೊಂದು ಮಾರ್ಗವಿದೆ ಎಂದು ಹೇಳಲಾಗದು. ರಕ್ಷಕನಾದ ಕ್ರಿಸ್ತನು ಮಾತ್ರ ಒಂದೇ ಮಾರ್ಗ (ಅಪೊಸ್ತಲರ ಕೃತ್ಯಗಳು 4:12). ಆತನು ನಾನೇ ಮಾರ್ಗ, ಸತ್ಯ ಜೀವವ, ನನ್ನ ಹೊರತು ತಂದೆಯ ಬಳಿಗೆ ಯಾರೂ ಬರಲಾರರು ಎಂದು ಹೇಳಿರುವನು (ಯೋಹಾನ 14:6). ಕ್ರಿಸ್ತನಿಲ್ಲದೆ, ಪರಲೋಕವಿಲ್ಲ!

ಮಗನ ಮುಖಾಂತರ ರಕ್ಷಣೆ! ಮಗನ ಬಳಿಗೆ ಬಂದು ರಕ್ಷಣೆ ಹೊಂದಿರಿ! ನಿಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಟ್ಟು ಆತನನ್ನು ನಂಬಿರಿ (ಲೂಕ 13:3). ಆತನೇ ದೇವರ ಮಗನೆಂದು ಅರಿಕೆ

ಮಾಡಿರಿ (ರೋಮಾಪುರ 10:9, 10). ಪಾಪ ಪರಿಹಾರಕ್ಕಾಗಿ ದೀಕ್ಷಾಸ್ನಾನ ಹೊಂದಿಕೊಳ್ಳಿರಿ. ಇದನ್ನು ಮಾಡುವಾಗ ಆತನ ಮಗನ ಮುಖಾಂತರ ರಕ್ಷಿಸಲ್ಪಡುವಿರಿ (ಅಪೊಸ್ತಲರ ಕೃತ್ಯಗಳು 2:38).

---

ಟಿಪ್ಪಣೆಗಳು

[1]ಕ್ರಿಸ್ತನ ಸಂದೇಶ. [2]ಪಾಪವು ಮುಚ್ಚಲ್ಪಟ್ಟಿತು (*hilasmos*) ಎಂದು ವಿವರಿಸುತ್ತದೆ. (W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* [Nashville: Thomas Nelson Publishers, 1985], 494.) [3]ಆತನ ಹೆಸರು (3 ಯೋಹಾನ 7). [4]1 ಯೋಹಾನ 2:19 ಸುಳ್ಳು ಬೋಧಕರು ನಮ್ಮಿಂದ ಹೊರಟು ಹೊದರು. (Thomas F. Johnson, *1, 2, and 3 John,* New International Biblical Commentary [Peabody, Mass.: Hendrickson Publishers, 1993], 56.) ಒಬ್ಬನು ಬಿದ್ದು ಹೋದರೆ ಅವನು "ಕ್ರಿಸ್ತನೇ ಅಲ್ಲ" ಎಂಬ ಕಾಲ್ವಿನರ ತತ್ವ ಅಂದರೆ ಕ್ರಿಸ್ತರಲ್ಲದವರಿಗೆ ಬರೆದನು ಎಂಬುದಾಗಿರುವದಿಲ್ಲ. Guy N. Woods, *A Commentary on the New Testament Epistles of Peter, John, and Jude* (Nashville: Gospel Advocate Co., 1983), 244-45, and Curtis A. Cates, "There Have Arisen Many Anti-Christs," *Denton Lectures* (1987), 137-38. [5]The heretic Cerinthus taught this doctrine in the second century. (J. W. Roberts, *The Letters of John,* The Living Word Commentary [Austin, Tex.: R. B. Sweet Co., 1968], 5, 6, 131.) [6]ಕ್ರಿಸ್ತನ ದೈವತ್ವಕ್ಕೆ ಸಾಕ್ಷಿ (ನೋಡಿ ಯೋಹಾನ 5:33-47). [7]KJVಯಲ್ಲಿ ವಚನ 7 ಮತ್ತು 8ರ ಪ್ರಕಾರ ಮೂಲ ಪ್ರತಿಗಳಲ್ಲಿರುವದಿಲ್ಲ. [8]"ನೀರು" ಕ್ರಿಸ್ತನ ದೀಕ್ಷಾಸ್ನಾನಕ್ಕೆ, "ರಕ್ತ"ವು ಆತನ ಮರಣಕ್ಕೆ ಸಾಕ್ಷಿಯಾಗಿದೆ. ಹಲವು ವ್ಯಾಖ್ಯಾನ ಕತೃರು ಬೇರೆ ವಿವರಣೆಯನ್ನು ಕೊಡುವರು. (Edwin A. Blum and Glenn W. Barker, "1, 2 Peter; 1, 2, 3 John; Jude," *The Expositor's Bible Commentary with the New International Version* [Grand Rapids, Mich.: Zondervan Publishing House, 1996], 144; Roberts, 130-31.) ಯೇಸುವಿನ ಮರಣದ ಕುರಿತಾದ ಈ ವಾಕ್ಯಭಾಗಗಳು ಧೈವಿಕ ದೇವರ ಕುಮಾರನಾದ, ಯೇಸು ಕ್ರಿಸ್ತನು ನಿಜವಾಗಿ ಮರಣಹೊಂದಿದನೆಂದು ತಿಳಿಸುತ್ತವೆ ಆದರೆ ಹಲವರು ಇದನ್ನು ಒಪ್ಪುತ್ತಿಲ್ಲ. [9]ಮೊದಲನೆಯ ಯೋಹಾನ 4:10 ಪಾಪದ ಪರಿಹಾರಕ್ಕಾಗಿ ಕ್ರಿಸ್ತನು ಬಂದನು ಎಂದು ಹೇಳುತ್ತದೆ. [10]1 ಯೋಹಾನ 3:16, ಹಾಗೂ ಯೋಹಾನ 3:16ಕ್ಕೆ ಹೊಸ ಒಡಂಬಡಿಕೆಯಲ್ಲಿ ಹೊಂದಾಣಿಕೆಯಿದೆ. 1 ಯೋಹಾನ 3:16ರ ಎರಡರಲ್ಲೂ ಮಧ್ಯದಲ್ಲಿರುವ ಪ್ರಮುಖ ವಾಕ್ಯವಾಗಿದೆ. ಮತ್ತು ಯೋಹಾನ ಪತ್ರಿಕೆಯಲ್ಲಿರುವ ಸಂದೇಶಕ್ಕೆ ಹೃದಯವಾಗಿದೆ.

[11]ವರ್ತಮಾನ ಕಾಲದಲ್ಲಿ ಮುಂದುವರಿದಿದೆ. [12]ಮಧ್ಯವರ್ತಿ *(Advocate)* ಎಂದರೆ (*parakletos*) "ಒಂದು ಬದಿಗೆ" ಕರೆಯಲ್ಪಟ್ಟದ್ದು. (Vine, Unger, and White, 111.) ಪರಿಶುದ್ಧಾತ್ಮ "Paraclete" - "ಆದರಣ ಕರ್ತ" (KJV) ಅಥವಾ "ಸಹಾಯಕನು" NASB - ಯೋಹಾನನ ಸುವಾರ್ತೆಯಲ್ಲಿ (ನೋಡಿ ಉದಾಹರಣೆಗೆ, ಯೋಹಾನ 15:26). ದೇವರು ಮತ್ತೊಬ್ಬ ಸಹಾಯಕನನ್ನು (*parakletos*) ಕಳುಹಿಸುವನು ಎಂದು ಯೇಸು ಹೇಳಿದರು (ಯೊಹಾನ 14:16), ಅಂದರೆ ಆತನೇ ಮೂಲ ಸಹಾಯಕ (*parakletos*). Paraclete, ಇದಕ್ಕೆ ನಾನಾ ಅರ್ಥಗಳಿವೆ ಆದರೆ ಇಲ್ಲಿ "ನ್ಯಾಯಾಲಕ್ಕೆ ಸಂಬಂಧಿಸಿದ ನ್ಯಾಯಾಧೀಶನನ್ನು" ತೋರಿಸುತ್ತದೆ (Woods, 222). [13]F. F. Bruce, *The Epistles of John: Introduction, Exposition and Notes* (N.p.: Pickering & Inglis, 1970; reprint, Grand Rapids, Mich.: Wm. B. Eerdmans Publishing Co., 1986), 53-54.